

ವಿಶ್ವದಲ್ಲೇ ಅತ್ಯಂತ ದುಬಾರಿ ಫ್ಲ್ಯಾಟ್ ಇರುವ ಹಾಂಕಾಂಗ್‌ನ ಕಟ್ಟಡ. ಐದು ಕೊಠಡಿಗಳ ಡುಪ್ಲೆಕ್ಸ್ ಫ್ಲ್ಯಾಟ್‌ಗೆ 266 ಕೋಟಿ ರೂಪಾಯಿ. ಚೀನಾದ ಉದ್ಯಮಿಯೊಬ್ಬ ಖರೀದಿಸಿದ್ದು ಸಾಮಾನ್ಯರ ಕಣ್ಣಿಗೆ ಕಾಣುವುದು ಕಟ್ಟಡದ ಬದಲು ಉರುಳಾಡುವ ಡಾಲರ್‌ಗಳ ಕಂತೆ!

ಉಡುಪು ಧರಿಸುವುದೆಂದರೆ ಅಲರ್ಜಿ ಎನ್ನುವವರಿಗೆ ಹವಾಯಿನಲ್ಲಿ ಭಾರಿ ಖುಷಿ. ವರ್ಷಕ್ಕೊಮ್ಮೆ ನಡೆಯುವ ಅಂಡರ್‌ಪ್ಯಾಂಟ್ ಓಟದ ಸ್ಪರ್ಧೆಯಲ್ಲಿ ಬರಿ ಮೈನಲ್ಲಿ ಮಾತ್ರ ಬರಬೇಡಿ ಎಂದು ಸಂಘಟಕರೇ ಕರೆ ನೀಡುತ್ತಾರಂತೆ. ಆದರೆ ಸ್ಪರ್ಧಾಳುಗಳಿಗೆ ಜಾಣ ಕಿವುಡೋ, ಅಥವಾ ಗುರಿಯ ಗೆರೆ ತಲುಪುವಷ್ಟರಲ್ಲಿ ಜಾರುವ ಆತುರ ಮೈ ಮೇಲಿದ್ದ ತುಂಡು ಬಟ್ಟೆಗಳಿಗೋ? ಒಟ್ಟಿನಲ್ಲಿ ಸಂಘಟಕರಿಗೆ ಟವೆಲ್ ಹಿಡಿದು ನಿಲ್ಲುವ ಎಕ್ಸ್‌ಟ್ರಾ ಕೆಲಸ.





ಬೆಲ್‌ಫಾಸ್ಟ್‌ನಲ್ಲಿ ವಿಶ್ವ ಕುಳ್ಳರ ಕ್ರೀಡಾಕೂಟ ನಡೆಯಿತು. ಉದ್ದೇಶವೇನೋ ಒಳ್ಳೆಯದೇ. ಅವರಿಗೊಂದು ಅವಕಾಶ ಕಲ್ಪಿಸಲು ಈ ಕ್ರೀಡಾಕೂಟ ಎಂದು ಸಂಘಟಕರು ಹೇಳಿಕೊಂಡರು. ಆದರೆ ಕೂಟದಲ್ಲಿ ಉದ್ದ ಬೆಳೆಯಲು ಇಂಥದ್ದೇ ಮಾತ್ರೆ ಸೇವಿಸಿ ಎಂದು ಪ್ರಾಯೋಜಕರು ಪದೇ ಪದೇ ಒರಲಿದ ಬಗ್ಗೆ ಕೂಟ ಮುಕ್ತಾಯವಾದ ನಂತರ ಕೂಟಚರ್ಚೆ ನಡೆಯುತ್ತಿದೆಯಂತೆ.

ಮಲೇಷ್ಯಾದ ಪೂರ್ವ ರಾಜ್ಯ ತೆರೆಂಗ್ಗಾನು. ಇಲ್ಲಿ ಜಗಳ ಮಾಡಿಕೊಂಡು ವಿಚ್ಛೇದನಕ್ಕೆ ಅರ್ಜಿ ಹಾಕುವ ದಂಪತಿ ಈಗ ಜಗಳ ಮಾಡಿಕೊಂಡರೂ ವಿಚ್ಛೇದನದವರೆಗೆ ಹೋಗಬಾರದು ಎಂಬ ಹೊಸ ನಿರ್ಣಯ ಮಾಡಿಕೊಳ್ಳುವ ಹಂತದಲ್ಲಿರಬಹುದು. ಕಾರಣ ವಿಚ್ಛೇದನದ ಸಂಖ್ಯೆ ಕಡಿಮೆ ಮಾಡಲು ಸರ್ಕಾರವೇ ಇಂಥ ದಂಪತಿಗೆ ಮಧುಚಂದ್ರದ ಆಮಿಷ ಒಡ್ಡಿದೆಯಂತೆ. ಕೆಲವರು ಮಧುಚಂದ್ರದ ಪ್ಯಾಕೇಜ್ ಕೈಗೆ ಸಿಗುವವರೆಗೆ ವಿಚ್ಛೇದನದ ಅರ್ಜಿಯನ್ನು ಕೈಲಿ ಹಿಡಿದು ತಿರುಗಲು ಅಡ್ಡಿಯಿಲ್ಲ.



ಫ್ಯಾಷನ್ ಷೋ ಎಂದರೆ ಪಾಪ, ಉಡುಪು ಬಡವಾಗುತ್ತಿತ್ತು. ಪ್ರೇಕ್ಷಕರ ದೃಷ್ಟಿಯೆಲ್ಲ ರೂಪದರ್ಶಿಗಳ ಮೇಲಿದ್ದಾಗ ಉಡುಪು ಮುದುರಿಕೊಳ್ಳುವುದು ಸಹಜವೇ. ಆದರೆ ಪ್ರಿಸ್ಟಿನಾದಲ್ಲಿ ನಡೆದ ಹೀಗೊಂದು ಷೋನಲ್ಲಿ ಕಣ್ಣು, ತುಟಿ ಎಲ್ಲೆಲ್ಲಿವೆ ಎಂದು ರಸಿಕರು ನೋಟ ಹರಿಯಬಿಟ್ಟಾಗ ಮಾತ್ರ ಉಡುಪಿನತ್ತ ಗಮನ ಹೋಯಿತಂತೆ!

ವಿಮಾನದಲ್ಲಿ ಪ್ರಯಾಣಿಸುವಾಗ ಪಕ್ಕದಲ್ಲಿ ಕೆನಡಾ ಪ್ರಜೆಯಿದ್ದಾರೆಯೇ ಎಂದು ನಿಗಾ ವಹಿಸಿ. ದಪ್ಪ ಶರೀರದವರು ತಮ್ಮ ಪಕ್ಕದಲ್ಲಿ ಕುಳಿತುಕೊಂಡರೆ, ಸೀನಿದರೆ, ಭಾರಿ ಬ್ಯಾಗ್ ಹಿಡಿದುಕೊಂಡು ಬಂದರೆ... ಹೀಗೆ ಏನೆಲ್ಲಾ ಕಾರಣಗಳಿಗೆ ಕೆನಡಾದವರಿಗೆ ಸಿಟ್ಟು ಬರುತ್ತದಂತೆ. ವಿಮಾನದ ಕಿಟಕಿ ಗಾಜು ಒಡೆದು ಹೊರಗೆ ಎಸೆಯುವಷ್ಟು, ಬ್ಯಾಗನ್ನಲ್ಲ, ಬ್ಯಾಗಿನ ಒಡೆಯನನ್ನು.

ನ್ಯೂಫೌಂಡ್‌ಲ್ಯಾಂಡ್‌ನ ಈ ನಾಯಿಯ ಉದ್ದ 7 ಅಡಿ, ಎತ್ತರ 36 ಇಂಚು. ತೂಕ 180 ಪೌಂಡ್. ದೈತ್ಯ ನಾಯಿಗೆ ಹೆದರಿದ ನೆರೆಯವ ಕೋರ್ಟಿಗೂ ಹೋಗಿದ್ದನಂತೆ. ನಾಯಿ ಮಾಲೀಕನಿಗೆ ಇದೇ ಈಗ ಪ್ಲಸ್ ಪಾಯಿಂಟ್. ಸಮನ್ಸ್ ಹಿಡಿದು ಕೋರ್ಟ್ ಕಚೇರಿಯಿಂದ ಗಿನ್ನೆಸ್ ಕಚೇರಿಗೆ ದೌಡಾಯಿಸಿದ್ದಾನೆ.



Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65